# ಕೋಮಲ ಜೀವಗಳು


# ಕಳೆದುಹೋದವು, ಪರಿಶುದ್ಧ

# ತತ್ವಗಳನ್ನು ಎತ್ತಿಹಿಡಿಯಲಾಯಿತು!

## ಗುರು ಗೋಬಿಂದ್ ಸಿಂಗ್ ಅವರ

## ಚಿಕ್ಕ ಮಕ್ಕಳ ಐತಿಹಾಸಿಕ

## ಸರ್ವೋಚ್ಛ ಬಲಿದಾನ



**ಸಾರ್ವಜನಿಕ**

ಹಿತಾಸಕ್ತಿಯಿಂದ ಇವರಿಂದ

ನಿರ್ಮಿಸಲಾಗಿದೆ:

ಗುರು ನಾನಕ್ ಇನ್ಸ್ಟಿಟ್ಯೂಟ್ ಆಫ್ ಗ್ಲೋಬಲ್

ಸ್ಟಡೀಸ್ ಕೆನಡಾ

# ಪರಿಚಯ

ನೈಸರ್ಗಿಕ ಮತ್ತು ಮಾನವ ನಿರ್ಮಿತ ವಿಪತ್ತುಗಳಲ್ಲಿ, ಲೆಕ್ಕವಿಲ್ಲದಷ್ಟು ಮುಗ್ಧ ಯುವ ಜೀವಗಳು ಬಲಿಯಾಗುವುದು ನಿಜವಾಗಿಯೂ ದುಃಖಕರ ಸಂಗತಿ. ಸುಳ್ಳು ಧಾರ್ಮಿಕ ಸಿದ್ಧಾಂತದ ನೆರಳಿನಲ್ಲಿ, ಏಳು ಮತ್ತು ಒಂಬತ್ತು ವರ್ಷದ ಪುಟ್ಟ ಗಂಡು ಮಕ್ಕಳನ್ನು ತಮ್ಮ ಸಿಖ್ ಧಾರ್ಮಿಕ ನಂಬಿಕೆಯನ್ನು ತ್ಯಜಿಸಿ ಇಸ್ಲಾಂ ಧರ್ಮವನ್ನು ಸ್ವೀಕರಿಸಲು ಪ್ರೋತ್ಸಾಹಿಸಿದ್ದು ನಿಜಕ್ಕೂ ಖೇದನೀಯ.

ಆ ಮಕ್ಕಳು ಅರಿವಿಲ್ಲದೆ, ನಿರ್ದೇಶನವನ್ನು ಪಾಲಿಸದಿದ್ದಲ್ಲಿ ಅವರು ತಮ್ಮ ಪ್ರಾಣ ಕಳೆದುಕೊಳ್ಳುತ್ತಾರೆ ಎಂದು ತಿಳಿಸಲಾಯಿತು.

ಸಾಹಿಬ್ಜಾದರು ಎಂದು ಕರೆಯಲ್ಪಡುತ್ತಿದ್ದ ಆ ಯುವ ರಾಜಕುಮಾರರು ಧಾರ್ಮಿಕ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ನೀಡಿದ ವಾಹೆಗುರುಗಳ (ದೇವರು) ಮಾತನ್ನು ಎತ್ತಿಹಿಡಿಯಲು ಹುತಾತ್ಮರಾಗಲೂ ಸಹ ಹಿಂಜರಿಯಲಿಲ್ಲ.

ಸಾಹಿಬ್ಜಾದರ ಪ್ರತಿಕ್ರಿಯೆಯನ್ನು ಗಮನಿಸಿ, ಘಟನಾ ಸ್ಥಳದಲ್ಲಿದ್ದ ಮೊಘಲ್ ಪ್ರಾಂತಾಧಿಪತಿ, ಮಂತ್ರಿಗಳು ಮತ್ತು ಬೇರೆಯ ಹಿರಿಯ ಅಧಿಕಾರಿಗಳು ಆಶ್ಚರ್ಯಚಕಿತರಾದರು ಮತ್ತು ಶ್ರೀಮಂತಿಕೆ ಮತ್ತು ಅಧಿಕೃತ ಪದವಿಗಳ ಉದಾರ ಕೊಡುಗೆಗಳ ಆಸೆಯನ್ನು ತೋರುತ್ತ ಅವರ ಮೇಲೆ ಮೇಲುಗೈ ಸಾಧಿಸಲು ಪ್ರಯತ್ನಿಸಿದರು. ಮತ್ತು ಈ ಪ್ರಲೋಭನೆಗಳು ರಾಜಕುಮಾರರ ಮೇಲೆ ಪ್ರಭಾವ ಬೀರಲು ವಿಫಲವಾದಾಗ, ಆ ಮಕ್ಕಳು ಶಿಕ್ಷೆ, ಜೈಲು, ಚಿತ್ರಹಿಂಸೆ ಮತ್ತು ಮರಣದ ಬೆದರಿಕೆಗಳನ್ನು ಎದುರಿಸಿದರು.

ಆದಾಗ್ಯೂ, ಸಾಹಿಬ್ಜಾದರ ಸಂಕಲ್ಪವನ್ನು ಮುರಿಯಲು ಅಂತಹ ಎಲ್ಲಾ ಬೆದರಿಕೆಗಳು ಮತ್ತು ಲೋಭದ ಕೊಡುಗೆಗಳು ಪರಿಣಾಮ ಬೀರುವುದರಲ್ಲಿ ವಿಫಲವಾದವು.

ಸಾಹಿಬ್ಜಾದರು - ಅಂದರೆ ಜೋರಾವರ್ ಸಿಂಗ್ ಮತ್ತು ಫತೇಹ ಸಿಂಗ್ ಅವರನ್ನು ನಿರ್ದಯವಾಗಿ ಅವರ ಸುತ್ತಲೂ ನಿರ್ಮಿಸಲಾದ ಇಟ್ಟಿಗೆ ಗೋಡೆಯಲ್ಲಿ ಜೀವಂತವಾಗಿ ಸಮಾಧಿ ಮಾಡಲಾಯಿತು.

ಈ ಸಂಕ್ಷಿಪ್ತ ಪ್ರಕಟಣೆಯು ಹತ್ತನೇ ಸಿಖ್ ಗುರುಗಳಾದ ಯುವ ರಾಜಕುಮಾರ ಗುರು ಗೋಬಿಂದ್ ಸಿಂಗ್ ಅವರ ಅಪ್ರತಿಮ ಬಲಿದಾನವನ್ನು ಜಗತ್ತಿಗೆ ಪರಿಚಯಿಸಲು ಒಂದು ವಿನಮ್ರ ಪ್ರಯತ್ನವಾಗಿದೆ.

ಏಳು ವರ್ಷದ ಎಳೆಪ್ರಾಯದಲ್ಲೂ ಸಹ ಮಾನವ ಆತ್ಮಸಾಕ್ಷಿಯ ಮೇಲೆ ತೀಕ್ಷ್ಣವಾದ ಗುರುತು ಮಾಡಬಹುದು

**ಎಂದು ಸಿಖ್ ಇತಿಹಾಸದ ಈ ದುರಂತ ಭಾಗದಿಂದ ನಾವು ಕಲಿಯಬಹುದೆಂದು ನಾವು ಆಶಿಸಬಹುದು.**

**ಸಾಹಿಬ್ಜಾದರು ಮತ್ತು ಅವರ ತಂದೆ ತಾಯಿ, ಅಂದರೆ, ಗುರು ಗೋಬಿಂದ್ ಸಿಂಗ್ ಜೀ ಮತ್ತು ಮಾತೆ ಅಜೀತ್ ಕೌರ್ (ಜಿತೋ ಜೀ) ಮತ್ತು ಅವರ ಅಜ್ಜಿ ಮಾತಾ ಗುಜರ್ ಕೌರ್ (ಗುಜ್ರಿ ಜೀ) ಅವರ ಮುಂದೆ ನಾವು ತಲೆಬಾಗುತ್ತೇವೆ, ಇವರು ಮಾನವ ಧಾರ್ಮಿಕ ಹಕ್ಕುಗಳಿಗೆ ಗೌರವವನ್ನು ಮತ್ತು ಅಂತಹ ತತ್ವಗಳನ್ನು ಎತ್ತಿಹಿಡಿಯಲು ಬಲಿದಾನದ ಮನೋಭಾವವನ್ನು ಬೆಳೆಸಿದರು.**

**ಸಮಾಜ ಸೇವೆಗೆ ಸಮರ್ಪಿಸಲಾಗಿದೆ**


ಜಿಯಾನ್ ಸಿಂಗ್ ಸಂಧು
ಚೇರ್
ಬೋರ್ಡ್ ಆಫ್
ಗವರ್ನರ್ಸ್
ಗುರು ನಾನಕ್ ಇನ್ಸ್ಟಿಟ್ಯೂಟ್ ಆಫ್ ಗ್ಲೋಬಲ್
ಸ್ಟಡೀಸ್ ಲ್ಯಾಂಗ್ಲಿ, ಬ್ರಿಟಿಷ್ ಕೊಲಂಬಿಯಾ,
ಕೆನಡಾ

# ಸನ್ನಿವೇಶ

ಗುರು ನಾನಕ್ (ಕ್ರಿ.ಶ. 1469 - 1539) ಅವರು ಪಂಜಾಬ್‌ನ ಒಂದು ಗ್ರಾಮೀಣ ಕುಟುಂಬದಲ್ಲಿ ಜನಿಸಿದರು. ಆ ಸಮಯದಲ್ಲಿ, ಇಬ್ರಾಹಿಂ ಲೋದಿಯ ನಿರಂಕುಶ ಆಡಳಿತ ನಡೆಯುತ್ತಿತ್ತು. ಜನರು ಅನಾದೃಶವಾದ ಯಾತನೆಯನ್ನು ಅನುಭವಿಸುತ್ತಿದ್ದರು. ಕಾನೂನು ಮತ್ತು ಸುವ್ಯವಸ್ಥೆ ಇರಲೇ ಇಲ್ಲ - ಕೇವಲ ಕ್ರೂರ ದೌರ್ಜನ್ಯ ಮನೆ ಮಾಡಿತ್ತು. ಮಹಿಳೆಯರಿಗೆ ಗೌರವ ಅಥವಾ ಹಕ್ಕು ಇರಲೇ ಇಲ್ಲ. ಜನರಿಗೆ ಶಿಕ್ಷಣದ ಹಕ್ಕು ಅಥವಾ ಪ್ರವೇಶ ಇರಲೇ ಇಲ್ಲ. ಒಂದು ಕಡೆಯಲ್ಲಿ, ಜನರು ರಾಜನ ದಬ್ಬಾಳಿಕೆಯ ಆಡಳಿತವನ್ನು ಎದುರಿಸುತ್ತಿದ್ದರೆ, ಮತ್ತೊಂದೆಡೆ, ಮೌಲಾಬಾಗಳಿಂದ ಶೋಷಣೆ ನಡೆಯುತ್ತಿತ್ತು, ಇವರು, ಧರ್ಮದ ಹೆಸರಿನಲ್ಲಿ ದೇವರ ಪ್ರತಿನಿಧಿಗಳಂತೆ ಬಿಂಬಿಸಿಕೊಳ್ಳುತ್ತಿದ್ದರು.

ಇದಕ್ಕೆಲ್ಲ ಸಾಕ್ಷಿಯಾದ ನಾನಕ್ ಅವರು, ಸುಧಾರಣೆಯ ಧ್ಯೇಯವನ್ನು ಪ್ರಾರಂಭಿಸಿದರು. ಒಂದು ಕಡೆ ನಿರಂಕುಶ ಆಡಳಿತವನ್ನು ಮತ್ತು ಇನ್ನೊಂದು ಕಡೆ ಅತ್ಯಂತ ದುರಾಸೆಯ ಮತ್ತು ಶೋಷಣೆಯ ಮೌಲಾನಾಗಳನ್ನು ಎದುರಿಸುವುದು, ಒಬ್ಬ ಸಾಮಾನ್ಯ ಹಳ್ಳಿಗನಿಗೆ ನಿಜವಾಗಿಯೂ ಅಭೂತಪೂರ್ವ ಮತ್ತು ದಾರ್ಶನಿಕ ಕಾರ್ಯವಾಗಿತ್ತು.

ನಿಸ್ಸಂದೇಹವಾಗಿ, ಅವರ ಪ್ರೇರಕ ಶಕ್ತಿಯು ದೈವಿಕ ಸ್ಫೂರ್ತಿಯಾಗಿತ್ತು. ಸತ್ಯ, ನ್ಯಾಯ ಮತ್ತು ಸಮಾನತೆ ಅವರ ಧ್ಯೇಯೋದ್ದೇಶಗಳ ಲಕ್ಷಣಗಳಾಗಿದ್ದವು. ತಾಳ್ಮೆಯ ತರ್ಕ, ವಿಮರ್ಶಾತ್ಮಕ ಚಿಂತನೆ, ಪ್ರಬಲ ಸಂವಹನ ಮತ್ತು ಪ್ರಕೃತಿಯು ಅವರು ಹೇಗಿರಬೇಕೆಂದು ಉದ್ದೇಶಿಸಿದೆಯೋ ಹಾಗೇ ಮುಕ್ತವಾಗಿರಬೇಕೆನ್ನುವ ಜನರ ಸಹಜ ಬಯಕೆಯು ಚಳುವಳಿಯನ್ನು ಪ್ರಚೋದಿಸುವ ಇಂಧನಗಳಾಗಿದ್ದವು.

ಸಾಮಾಜಿಕ, ಆಧ್ಯಾತ್ಮಿಕ, ಆರ್ಥಿಕ ಮತ್ತು ಶೈಕ್ಷಣಿಕ ಸುಧಾರಣೆಯ ಈ ಚಳುವಳಿಯು; ತರುವಾಯ 'ಸಿಖೀ' ಎಂದು ಹೆಸರಾಯಿತು.

ನಿರಂಕುಶ ಪ್ರಭುತ್ವ ಮತ್ತು ಧಾರ್ಮಿಕ ಪದ್ಧತಿಗಳ ಮೂಲಕ ಶೋಷಣೆಯನ್ನು ನೆಚ್ಚಿಕೊಂಡ ಮೌಲಾನಾಗಳಿಗೆ ಮನಸ್ಸಿನಲ್ಲಿ ನಡುಕ ಶುರುವಾಗಿತ್ತು, ಮತ್ತು ಇವರು ನಾನಕ್ ಅವರ ಚಳುವಳಿಯಿಂದ ಅನಾವರಣಗೊಂಡಿದ್ದ ಸ್ವಾತಂತ್ರ್ಯದ ಶಕ್ತಿಗಳನ್ನು ವಿರೋಧಿಸಲು ಮತ್ತು ಹೋರಾಡಲು ಕೈಜೋಡಿಸಿದರು.

ಪ್ರಭುತ್ವದ ದಬ್ಬಾಳಿಕೆ ಮತ್ತು ವ್ಯವಸ್ಥಿತ ಧಾರ್ಮಿಕ ಶೋಷಣೆಯಿಂದ ಜನರನ್ನು ಮುಕ್ತಗೊಳಿಸಲು, ಗುರು ಅರ್ಜನ್ ದೇವ್ ಜೀ ಮತ್ತು ಗುರು ತೇಜ್ ಬಹದ್ದೂರ್ ಅವರು ನಾನಕ್ ಅವರ ಧ್ಯೇಯಕ್ಕಾಗಿ ಬಲಿದಾನ ನೀಡಿದರು.


ಧ್ಯೇಯವನ್ನು ಜೀವಂತವಾಗಿಡಲು ಶಸ್ತ್ರಾಸ್ತ್ರಗಳ ಬಳಕೆಯಲ್ಲದೇ ಬೇರೆ ದಾರಿಯಿಲ್ಲದಿದ್ದಾಗ ಹತ್ತನೇ ಸಿಖ್ ಗುರುಗಳಾದ ಗುರು ಗೋಬಿಂದ್ ಸಿಂಗ್ ಅವರು, ಮೊಘಲ್ ದಬ್ಬಾಳಿಕೆಯನ್ನು ಎದುರಿಸಲು ಬೃಹತ್ ಸೈನಿಕರ ಪಡೆಯನ್ನು ಒಗ್ಗೂಡಿಸಿದರು ಮತ್ತು ಅದೇ ಸಮಯದಲ್ಲಿ ಸಹ ಮಾನವರಲ್ಲಿ ಸ್ವಾತಂತ್ರ್ಯ ಮತ್ತು ಸ್ವ-ನಿರ್ಣಯದ ಸುಪ್ತ ಮನೋಭಾವವನ್ನು ಜಾಗೃತಗೊಳಿಸುವ ಮತ್ತು ಶಕ್ತಿ ತುಂಬುವ ಕೆಲಸ ಮಾಡಿದರು.

ಹದಿನೇಳನೆಯ ಶತಮಾನದ ಕೊನೆಯಲ್ಲಿ, ದುರದೃಷ್ಟವಶಾತ್, ಅನೇಕ ಸ್ಥಳೀಯ ಆಡಳಿತಗಾರರು ಮತ್ತು ರಾಜರುಗಳ ಹಾಗೂ ಮೊಘಲ್ ಅಧಿಕಾರದ ಅಡಿಯಲ್ಲಿ ಬದುಕುತ್ತಿದ್ದ ಜನರ ಸಹಾಯ ಪಡೆಯುತ್ತಿದ್ದ ಬೃಹತ್ ಮೊಘಲ್ ಪಡೆಗಳ ಮೇಲೆ ಗುರು ಗೋಬಿಂದ್ ಸಿಂಗ್ ಅವರು ಹಲವಾರು ಯುದ್ಧಗಳಲ್ಲಿ ಗೆಲುವು ಗಳಿಸಿದರು.

ಗುರು ಗೋಬಿಂದ್ ಸಿಂಗ್ ಅವರು ಆನಂದಪುರ್ ಸಾಹಿಬ್‌ನಲ್ಲಿ ಒಂದು ದೊಡ್ಡ ಕೋಟೆಯನ್ನು ನಿರ್ಮಿಸಿದರು (ವಿಶ್ವ-ಪ್ರಸಿದ್ಧ ಆಧುನಿಕ ನಗರವಾದ ಚಂಡೀಗಢಕ್ಕೆ ಹತ್ತಿರವಾಗಿದೆ). ಇದು ಒಂದು ಬೃಹತ್ ಸೈನ್ಯದ ರಕ್ಷಣಾದಳವಾಗಿತ್ತು, ಮತ್ತು ಮೊಘಲ್ ಸೈನ್ಯವು ಅದನ್ನು ಸಂಭಾವ್ಯ ಬೆದರಿಕೆ ಎಂದು ಪರಿಗಣಿಸಿತು ಮತ್ತು ಅದಕ್ಕೆ ಮುತ್ತಿಗೆ ಹಾಕಿತು.

# ಸಂಚಿಕೆ 7

ಗುರು ಗೋಬಿಂದ್ ಸಿಂಗ್ ಅವರ ಕೋಟೆಯಾದ ಆನಂದಪುರ್, ಮೊಘಲ್ ಚಕ್ರವರ್ತಿಯ ಮುತ್ತಿಗೆಗೆ ಒಳಪಟ್ಟಿತ್ತು. ಆಕ್ರಮಣಕಾರಿ ಮೊಘಲ್ ಸೈನಿಕರು ಮತ್ತು ಸಿಖ್ ಯೋಧರ ನಡುವಿನ ಭೀಕರ ಯುದ್ಧವು ಹಲವಾರು ತಿಂಗಳುಗಳಿಂದ ನಡೆಯುತ್ತಿತ್ತು,



ಹಾಗೂ ಸಿಖ್ ರಕ್ಷಣೆಯನ್ನು ಭೇದಿಸುವಲ್ಲಿ ಮೊಘಲ್ ಆಕ್ರಮಣಕಾರರು ವಿಫಲರಾಗಿದ್ದರು. ಹತಾಶೆಗೊಂಡ ಮೊಘಲ್ ಚಕ್ರವರ್ತಿ ಔರಂಗಜೇಬ್ ಶಾಂತಿಯ ಪ್ರಸ್ತಾಪದೊಂದಿಗೆ ಸಿಖ್ ಗುರುಗಳಿದ್ದಲ್ಲಿ ರಾಜತಾಂತ್ರಿಕ ದೂತರನ್ನು ಕಳುಹಿಸಿದರು. ಮುತ್ತಿಗೆಯಲ್ಲಿರುವ ಕೋಟೆಯನ್ನು ಖಾಲಿ ಮಾಡಿದರೆ ಎಲ್ಲಾ ಸಿಖ್ಖರು ಮತ್ತು ಗುರುಗಳ ಕುಟುಂಬಕ್ಕೆ ರಕ್ಷಣೆ ನೀಡುತ್ತೇನೆಂದು ಔರಂಗಜೇಬ್ ಪವಿತ್ರ ಕುರಾನ್ ಹೆಸರಿನಲ್ಲಿ ಪ್ರತಿಜ್ಞೆ ಮಾಡಿದ.

---------

# ಸಂಚಿಕೆ 8

ಗುರು ಗೋಬಿಂದ್ ಸಿಂಗ್ ಅವರು ಔರಂಗಜೇಬ್‌ನ ವಾಗ್ದಾನವನ್ನು ನಂಬಿರದಿದ್ದರೂ ಸಹ, ಪವಿತ್ರ ಕುರಾನ್ ಹೆಸರಿನಲ್ಲಿ ಮೊಘಲ್ ಚಕ್ರವರ್ತಿಯು



ಗೋಬಿಂದ್ ಸಿಂಗ್ ಅವರು ಇದಕ್ಕೆ

ಆದರೆ, ಗುರುಗಳ ಸಿಖ್ ಪಡೆಗಳು ಕೋಟೆಯಿಂದ ಹೊರ ಬಂದ ತಕ್ಷಣವೇ, ಸಿಖ್‌ಗಳ ಮೇಲೆ ಭಾರೀ ದಾಳಿ ನಡೆಸಲು ಮೊಘಲ್ ಪಡೆಗಳು ಆ ಅವಕಾಶವನ್ನು ಬಳಸಿಕೊಂಡರು.


'ಸಿರ್ಸಾ' ನದಿಯ ದಡದಲ್ಲಿ ಒಂದು ಭೀಕರ ಯುದ್ಧ ಪ್ರಾರಂಭವಾಯಿತು. ಸಿಖ್ ಯೋಧರು ಬಹಳ ಧೈರ್ಯದಿಂದ ಹೋರಾಡಿದರು, ಮತ್ತು ನೆಲಕ್ಕೆ ಉರುಳುವ ಪ್ರತಿಯೊಬ್ಬ ಸಿಖ್‌ನ ಪ್ರತಿಯಾಗಿ ಅನೇಕ ಮೊಘಲ್ ಸೈನಿಕರನ್ನು ಹೊಡೆದುರುಳಿಸಿದರು.

# ಸಂಚಿಕೆ 9

------------------

# ಸಂಚಿಕೆ 10

ಈ ಭೀಕರ ಕದನದಲ್ಲಿ, ಗುರುವಿನ ಇಡೀ ಕುಟುಂಬ ಒಬ್ಬರಿಂದೊಬ್ಬರು ಬೇರ್ಪಟ್ಟರು. ಕಿರಿಯ ಪುತ್ರರಾದ ಸಾಹಿಬ್ಜಾದಾ ಜೋರಾವರ್ ಸಿಂಗ್ ಮತ್ತು ಫತೇಹ ಸಿಂಗ್,



ತಮ್ಮ ಅಜ್ಜಿ ಮಾತಾ ಗುಜ್ರಿ ಜೀ ಜೊತೆಯಲ್ಲಿದ್ದರು. ಅವರು ಒರಟು ಭೂಪ್ರದೇಶ ಮತ್ತು ದಟ್ಟವಾದ ಕಾಡಿನ ಮೂಲಕ ಮುಂದೆ ನಡೆದರು.

ಅವರ ದಾರಿಯಲ್ಲಿ, ಸಿಂಹಗಳು ಮತ್ತು ಹಾವುಗಳು ಸೇರಿದಂತೆ ಅನೇಕ ಕಾಡು ಪ್ರಾಣಿಗಳನ್ನು ಎದುರಿಸಿದರು, ಆದರೆ ಸಾಹಿಬ್ಜಾದರು ತಮ್ಮ ಅಜ್ಜಿಯ ರಕ್ಷಣೆಯಲ್ಲಿ ತುಂಬಾ ಸುರಕ್ಷಿತವಾಗಿ ಮತ್ತು ನಿರ್ಭಯದಿಂದ ಇದ್ದರು. ಗ್ರಂಥಗಳನ್ನು ಪಠಿಸುತ್ತಾ ನಿರ್ಭೀತಿಯಿಂದ ಅವರು ಮುಂದೆ ಹೋಗುತ್ತಿದ್ದರು. ಅವರ ಅಜ್ಜಿ ಕೂಡ ದಾರಿಯಲ್ಲಿ ಅನೇಕ ಸ್ಫೂರ್ತಿದಾಯಕ ದಂತಕಥೆಗಳನ್ನು ಹೇಳಿದರು.

-------

# ಸಂಚಿಕೆ 11



-----

ಹಿರಿಯ ಸಾಹಿಬ್ಜಾದರು - ಅಂದರೆ, ಅಜಿತ್ ಸಿಂಗ್ ಮತ್ತು ಜುಜಾರ್ ಸಿಂಗ್ ಇಬ್ಬರೂ ಸಹ ತಮ್ಮ ತಂದೆ - ಗುರು ಗೋಬಿಂದ್ ಸಿಂಗ್ ಅವರೊಂದಿಗೆ ಇದ್ದರು. ಅವರು 'ಸಿರ್ಸಾ' ನದಿಯನ್ನು ದಾಟಿ ರೋಪರ್‌ನಲ್ಲಿ ರಾತ್ರಿ ಕಳೆದರು. ಮುಂಜಾನೆ ಹೊತ್ತಿಗೆ, ಅವರು ಚಮ್‌ಕೌರ್ ಸಾಹಿಬ್‌ನಲ್ಲಿ ತಮ್ಮ ಕೋಟೆಯನ್ನು ತಲುಪಿದರು.

# ಸಂಚಿಕೆ 12

ಸುದೀರ್ಘ ಮತ್ತು ಪ್ರಯಾಸಕರ ಪ್ರಯಾಣದ ನಂತರ, ಮಾತಾ ಗುಜ್ರಿ ಜೀ, ತಮ್ಮ ಇಬ್ಬರು ಸಾಹಿಬ್ಜಾದಾಗಳೊಂದಿಗೆ, ನೀರು ವಾಹಕನಾದ 'ಕಮ್ಮೋ' ಎಂಬುವನ




ಗುಡಿಸಿಲಿನ ಹತ್ತಿರ ಹೋದರು. ಮಾತಾಜಿಯನ್ನು ಕಂಡ ಕೂಡಲೇ, ಆತ ಹೊರಗೆ ಬಂದು ಗೌರವಪೂರ್ವಕವಾಗಿ ಕೈಮುಗಿದು ಹೀಗೆ ಪ್ರಾರ್ಥಿಸಿದರು, 'ಸ್ವಲ್ಪ ವಿಶ್ರಾಂತಿ ಪಡೆಯಲು ನೀವು ನನ್ನ ಪುಟ್ಟ ಗುಡಿಸಲಿಗೆ ಬಂದಿರುವುದು ನನ್ನ ಸೌಭಾಗ್ಯ ಮತ್ತು ಗೌರವವಾಗಿದೆ'.

ಅಜ್ಜಿ ಮತ್ತು ಸಾಹಿಬ್ಜಾದರು ಕಮ್ಮೋವಿನ ಭಕ್ತಿಯನ್ನು ಗಮನಿಸಿ ಸಮಾಧಾನಗೊಂಡರು


# ಸಂಚಿಕೆ 13

ಮತ್ತು ಸಂತೋಷಪಟ್ಟರು. ಆ ಸಮಯದಲ್ಲಿ ಕತ್ತಲೆಯಾಗುತ್ತಿದ್ದರಿಂದ ಮಾತಾ ಜೀ ಕರ್ಮ್ಯೋನ ಗುಡಿಸಲಿನಲ್ಲಿ ರಾತ್ರಿ ಕಳೆಯುವುದು ಸೂಕ್ತವೆಂದು ಭಾವಿಸಿದರು. 'ಲಚ್ಮೀ,' ಎನ್ನುವ ಒಬ್ಬ ಮಹಿಳೆ ಬಹಳ ಬೇಗ ಅಡುಗೆ ಮಾಡಿದಳು ಮತ್ತು ಮಾತಾ ಜೀ ಮತ್ತು ಸಾಹಿಬ್ಜಾದರಿಗೆ ಗೌರವದಿಂದ ಬಡಿಸಿದಳು. ಅವರೆಲ್ಲರೂ ದೇವರ ಆಶೀರ್ವಾದದೊಂದಿಗೆ ಆಹಾರವನ್ನು ಸೇವಿಸಿದರು.

-----

# ಸಂಚಿಕೆ 14

ಮರುದಿನ, ಈ ಹಿಂದೆ ಗುರುಗಳ ಲಂಗರ್ (ಸಮುದಾಯ ಅಡುಗೆಮನೆ) ನಲ್ಲಿ ಕೆಲಸ ಮಾಡುತ್ತಿದ್ದ ಗಂಗೂ ಎಂಬ ಬ್ರಾಹ್ಮಣನು ಗುರುಗಳ ಕುಟುಂಬದ ಕುರಿತು



ತಿಳಿದು ಅವರನ್ನು ಭೇಟಿಯಾಗಲು ಬಂದನು. ಆತ ಗೌರವದಿಂದ ಮಾತಾ ಜೀ ಯವರ ಮುಂದೆ ಕೈಮುಗಿದು ತಮ್ಮ ಗ್ರಾಮವಾದ 'ಖೇರ್ಹಿ' ಗೆ ತಮ್ಮೊಂದಿಗೆ ಬರುವಂತೆ ಅವರನ್ನು ಪ್ರಾರ್ಥಿಸಿದರು. ಅವರನ್ನು ಚೆನ್ನಾಗಿ ನೋಡಿಕೊಳ್ಳಲಾಗುವುದು ಮತ್ತು ಯಾವುದೇ ಸಮಸ್ಯೆಯಾಗುವುದಿಲ್ಲವೆಂದು ಅವರಿಗೆ ಭರವಸೆ ನೀಡಿದರು. ಅವರು ಪುನಃ ಭರವಸೆ ನಿಡುತ್ತಾ, "ನೀವಿಲ್ಲಿರುವ ಕುರಿತು ಯಾರಿಗೂ ತಿಳಿಯುವುದಿಲ್ಲ" ಎಂದು ಹೇಳಿದರು.

'ನನ್ನ ಮೇಲೆ ನಂಬಿಕೆ ಇಡಿ' ಎಂದು ಗಂಗೂ ಆಕೆಯನ್ನು ಪ್ರಾರ್ಥಿಸಿ ಅವರ ಚಿಕ್ಕಪುಟ್ಟ ವಸ್ತುಗಳನ್ನು ಒಂದು ಹೇಸರಗತ್ತೆಯ ಮೇಲೆ ಇಡಲು ಪ್ರಾರಂಭಿಸಿದಾಗ ಮಾತಾ ಜೀ ಬಹಳ ಮೌನವಾಗಿ ಯೋಚಿಸುತ್ತಿದ್ದರು ಶೀಘ್ರದಲ್ಲೇ, ಅವರು ಗಂಗೂವಿನ ಹಳ್ಳಿಗೆ ತೆರಳಲು ಪ್ರಾರಂಭಿಸಿದರು.

# ಸಂಚಿಕೆ 15


**ಇಬ್ಬರೂ ಸಾಹಿಬ್ಜಾದರು ತಮ್ಮ ಅಜ್ಜಿಯ ಅಕ್ಕಪಕ್ಕದಲ್ಲಿಯೇ ನಡೆಯುತ್ತಿದ್ದರು. ಆಗಾಗ, ಅವರು ತಮ್ಮ ತಂದೆಗಳಾದ ಗುರು ಗೋಬಿಂದ್ ಸಿಂಗ್ ಮತ್ತು ಅವರ ಹಿರಿಯ ಸಹೋದರರಾದ ಸಾಹಿಬ್ಜಾದಾ ಅಜಿತ್ ಸಿಂಗ್ ಮತ್ತು ಜುಜಾರ್ ಸಿಂಗ್‌ರ ಕುರಿತು ವಿಚಾರಿಸುತ್ತಿದ್ದರು.**

**ಅವರು ತಮ್ಮ ತಲುಪುದಾಣವನ್ನು ತಲುಪುವಷ್ಟರಲ್ಲಿ ಸಂಜೆಯಾಗಿತ್ತು. ಅವರು ಖೇರ್ಹಿ ಗ್ರಾಮದ ಗಂಗೂವಿನ ಮನೆಯಲ್ಲಿ ನೆಲೆಸಿದರು ಮತ್ತು ಮಾತಾ ಜೀ ಅವರು ತಮ್ಮೊಂದಿಗೆ ತಂದ ವಸ್ತುಗಳನ್ನು ಪಕ್ಕಕ್ಕೆ ಇಟ್ಟರು.**

**----**

# ಸಂಚಿಕೆ 16

ಮಾತಾ ಜೀ ಅವರು ಸಾಹಿಬ್ಜಾದರಿಗೆ ತಮ್ಮ ಬಟ್ಟೆಗಳನ್ನು ಬದಲಾಯಿಸಿಕೊಳ್ಳುವಂತೆ ಹೇಳಿ ಅವರಿಗೆ ಒಂದು ಹಾಸಿಗೆಯನ್ನು ಸಿದ್ಧಪಡಿಸಿದರು. ಮೂವರೂ ಸಹ ತಮ್ಮ ಸಂಜೆಯ ಪ್ರಾರ್ಥನೆಯನ್ನು ಸಲ್ಲಿಸಿದರು. ಮಾತಾ ಜೀ ಇಬ್ಬರೂ ಸಾಹಿಬ್ಜಾದರನ್ನು ಬಿಗಿಯಾಗಿ ಅಪ್ಪಿಕೊಂಡರು,



ಆಶೀರ್ವದಿಸಿ ಮಲಗಲು ಕರೆದೊಯ್ದರು. ಸಾಹಿಬ್ಜಾದರು ತಮ್ಮ ಅಜ್ಜಿಯ ಎದೆಯ ಮೇಲೆ ತಲೆಯಿಟ್ಟು ನಿದ್ರಿಸಿದರು.

ರಾತ್ರಿಯಲ್ಲಿ, ಗಂಗೂ, ಬಹಳ ಮೆಲ್ಲನೆ, ಗುರುಗಳ ಕುಟುಂಬ ವಿಶ್ರಾಂತಿ ಪಡೆಯುತ್ತಿದ್ದ ಕೋಣೆಯನ್ನು ಪ್ರವೇಶಿಸಿದನು. ಮಾತಾ ಜೀ ನಿದ್ರಿಸುತ್ತಿರುವುದನ್ನು ಆತ ಗಮನಿಸಿದ ನಂತರ,

ಆತನು ತುಂಬಾ ಸದ್ದಿಲ್ಲದೆ ಮತ್ತು ಎಚ್ಚರಿಕೆಯಿಂದ ಹಾಸಿಗೆಯ ಕೆಳಗಿರುವ

# ಸಂಚಿಕೆ 17

ಅವರ ವಸ್ತುಗಳನ್ನು ಹುಡುಕಲು ಪ್ರಾರಂಭಿಸಿದರು. ಬಹಳ ಸಮಯದ ನಂತರ, ಆತನಿಗೆ ಚಿನ್ನದ ನಾಣ್ಯಗಳ ಒಂದು ಚೀಲ ದೊರಕಿತು. ಆತ ಈ ಚೀಲವನ್ನು ಹಿಡಿದು ಬೇಗನೆ ಆದರೆ ಸದ್ದಿಲ್ಲದೆ ಕೋಣೆಯಿಂದ ಹೊರಹೋದನು.

ಮಾತಾ ಜೀ, ಮನೆಯೊಳಕ್ಕೆ ಯಾರೋ ಪ್ರವೇಶಿಸುತ್ತಿರುವುದನ್ನು, ಹಾಸಿಗೆಯ ಕೆಳಗಿರುವ ವಸ್ತುಗಳನ್ನು ಹುಡುಕುವುದನ್ನು ಮತ್ತು ಸದ್ದಿಲ್ಲದೆ ಕೋಣೆಯಿಂದ ಹೋರಹೋಗುವುದನ್ನು ಗಮನಿಸಿದರೂ ಆಕೆ ಯಾರನ್ನೂ ಸಹ ಎಬ್ಬಿಸಲಿಲ್ಲ.

-----

# ಸಂಚಿಕೆ 18

ಬೆಳಗಿನ ಸಮಯದಲ್ಲಿ, ಮಾತಾ ಜೀ ಎಚ್ಚರಗೊಂಡು ತಮ್ಮ ವಸ್ತುಗಳು ನೆಲದ ಮೇಲೆ ಹರಡಿರುವುದನ್ನು ನೋಡಿದಾಗ, ಆಕೆ ಗಂಗೂವಿಗೆ ಹೀಗೆ ಕೇಳಿದರು.



'ನಮ್ಮ ಎಲ್ಲಾ ವಸ್ತುಗಳು ನೆಲದ ಮೇಲೆ ಹರಡಿಕೊಂಡಿವೆ. ಹೊರಗಿನ ಮುಖ್ಯ ಬಾಗಿಲನ್ನೂ ಸಹ ಮುಚ್ಚಲಾಗಿತ್ತು. ಚಿನ್ನದ ನಾಣ್ಯಗಳ ಚೀಲ ಏನಾಯಿತು?' ಎಂದು. ಗಂಗೂ ಆಶ್ಚರ್ಯಪಡುವಂತೆ ನಟಿಸಿದನು ಮತ್ತು ಅಲ್ಲಿ ಇಲ್ಲಿ ನೋಡಿದನು.

ಗಂಗೂ ಏನನ್ನೂ ಮಾತನಾಡದೆ ಹೊರಗೆ ಓಡಿ ಬಂದು "ಕಳ್ಳತನ ನಡೆದಿದೆ. ಮಾತಾ ಜೀ ಅವರ ವಸ್ತುಗಳನ್ನು ಕದಿಯಲಾಗಿದೆ."



ಮಾತಾ ಗುಜ್ರಿ ಜೀ ಅವರು, ಗಂಗೂವನ್ನು ಒಳಗೆ ಕರೆದು ಹೇಳಿದರು, 'ಈ ರೀತಿ ಸಾರ್ವಜನಿಕ ಸ್ಥಳದಲ್ಲಿ ಜೋರಾಗಿ ಮಾತನಾಡುವುದು ಸರಿಯಲ್ಲ. ನೀವು ಚಿನ್ನದ ನಾಣ್ಯಗಳನ್ನು ಇಟ್ಟುಕೊಳ್ಳಬಹುದು ಮತ್ತು ಅವುಗಳನ್ನು ಹಿಂತಿರುಗಿಸುವಂತೆ ಯಾರೂ

# ಸಂಚಿಕೆ 19

**ನಿಮ್ಮನ್ನು ಕೇಳಿಲ್ಲ.**

**ಇದನ್ನು ಕೇಳಿ ಗಂಗೂ ಸಿಟ್ಟಿನಿಂದ ಕಿರುಚುತ್ತಾ, 'ಇದು ಅತಿರೇಕವಾಗಿದೆ. ನಾನು**





**ನಿಮಗೆ ಆಶ್ರಯ ನೀಡಿದ್ದೇನೆ ಮತ್ತು ನೀವು ನನ್ನ ಮೇಲೆ ಕಳ್ಳತನದ ಆರೋಪ ಮಾಡುತ್ತಿದ್ದೀರಾ? ಮಾತಾ ಜೀ ಅವರು ಆತನನ್ನು ಶಾಂತಗೊಳಿಸಲು ತುಂಬಾ ಪ್ರಯತ್ನಿಸಿದರೂ ಗಂಗೂ ಬಹಳ ಜೋರಾಗಿ ಕೂಗುತ್ತಾ ಮನೆಯಿಂದ ಹೊರಗೆ ಬಂದನು.**

**-------**

# ಸಂಚಿಕೆ 20

ಗಂಗೂ ನೇರವಾಗಿ ಕೊತ್ವಾಲರ (ಕಮಿಷನರ್‌ರ) ಕಚೇರಿಯ ಕಡೆಗೆ ಹೋದನು. ಒಳಗೆ ಹೋಗಿ ಆತ ಗೌರವ ಸಲ್ಲಿಸಿದ



ಮತ್ತು ಮೆಲ್ಲನೆ ಪಿಸುಗುಡುತ್ತಾ, ಮಾನ್ಯರೇ, ನಾನು ನಿಮಗೆ ಒಂದು ರಹಸ್ಯದ ಮಾಹಿತಿಯನ್ನು ತಿಳಿಸಲು ಬಂದಿದ್ದೇನೆ.

ಕೊತ್ವಾಲರು ಪ್ರಶ್ನಿಸಿದರು, "ಹೌದಾ, ಹೇಳಿ, ನೀವು ಯಾವ ಮಾಹಿತಿಯನ್ನು ಹೇಳಬೇಕೆಂದಿದ್ದೀರಿ?"

"ಮಾನ್ಯರೇ, ಗುರು ಗೋಬಿಂದ್ ಸಿಂಗ್ ಅವರ ತಾಯಿ ಮತ್ತು ಅವರ ಇಬ್ಬರು ಕಿರಿಯ ಪುತ್ರರು ನನ್ನ ಮನೆಯಲ್ಲಿ ಅಡಗಿಕೊಂಡಿದ್ದಾರೆ."

ಇದನ್ನು ಕೇಳಿ ಕೊತ್ವಾಲರಿಗೆ ರೋಮಾಂಚನೆಯಾಯಿತು. ಆತ ತನ್ನ ಹಿರಿಯ ಪೊಲೀಸ್ ಅಧಿಕಾರಿಯನ್ನು ಕರೆದು ಗುರುವಿನ ಕುಟುಂಬವನ್ನು ಬಂಧಿಸಲು ತನ್ನ ಪೊಲೀಸ್ ಪಡೆಯನ್ನು ತೆಗೆದುಕೊಂಡು ಗಂಗೂವಿನೊಂದಿಗೆ ಹೋಗುವಂತೆ

# ಸಂಚಿಕೆ 21

**ಸೂಚಿಸಿದರು.**

-----

# ಸಂಚಿಕೆ 22

ಪೊಲೀಸ್ ಅಧಿಕಾರಿಗಳು ಗಂಗೂವಿನ ಮನೆಯನ್ನು ತಲುಪಿದಾಗ, ನೆರೆಹೊರೆಯವರು ಮತ್ತು ದಾರಿಹೋಕರು ತುಂಬಾ ಕುತೂಹಲದಿಂದ ನೋಡುತ್ತಿದ್ದರು. ಪೊಲೀಸರು



ಮನೆಯ ಹಿಂಭಾಗದ ಬಾಗಿಲಿನ ಹತ್ತಿರ ಓಡಿದಾಗ ಅಲ್ಲಿ ಮಾತಾ ಜೀ ಮತ್ತು ರಾಜಕುಮಾರರು ಆರಾಮವಾಗಿ ಹಾಸಿಗೆಯ ಮೇಲೆ ಬಹಳ ನಿರಾತಂಕವಾಗಿ ಕುಳಿತಿರುವುದನ್ನು ಗಮನಿಸಿ ಆಶ್ಚರ್ಯಚಕಿತರಾದರು.

ಪೊಲೀಸ್ ಅಧಿಕಾರಿ ಕೊತ್ವಾಲರ ಆದೇಶವನ್ನು ತಿಳಿಸಿದರು ಮತ್ತು ಗುರುಗಳ ಕುಟುಂಬಕ್ಕೆ ತಮ್ಮೊಂದಿಗೆ ಬರಲು ಹೇಳಿದರು.

ಮಾತಾ ಜೀ ಅವರು, ಇಬ್ಬರು ಸಾಹಿಬ್ಜಾದರನ್ನು ಬಿಗಿಯಾಗಿ ತಬ್ಬಿಕೊಂಡು, "ಎದ್ದೇಳಿ ಮಕ್ಕಳೇ, ಹೋಗೋಣ" ಎಂದು ಹೇಳಿದರು.

ಸಾಹಿಬ್ಜಾದಾ ಜೋರಾವರ್ ಸಿಂಗ್ ಮತ್ತು ಸಾಹಿಬ್ಜಾದಾ ಫತೇಹ ಸಿಂಗ್


# ಸಂಚಿಕೆ 23

**ತಕ್ಷಣವೇ ಸಿದ್ಧರಾದರು, ಮತ್ತು, ಮಾತಾ ಗುಜ್ರಿ ಜೊತೆಗೆ ಪೊಲೀಸ್ ಅಧಿಕಾರಿಗಳೊಂದಿಗೆ ಹೊರನಡೆದರು.**

-----

# ಸಂಚಿಕೆ 24

ಅಷ್ಟರ ಸಮಯದಲ್ಲಿ, ಹೊರಗಡೆ ಭಾರೀ ಸಂಖ್ಯೆಯಲ್ಲಿ ಜನ ಜಮಾಯಿಸಿದ್ದರು. ಗಂಗೂ




ಒಂದು ಕಡೆ ನಿಂತಿದ್ದನು, ಮತ್ತು ಎಲ್ಲಾ ಜನರೂ ಸಹ ಅವನತ್ತ ಬೆರಳು ತೋರಿಸುತ್ತಿದ್ದರು. ಆತ ತಪ್ಪಿತಸ್ಥನಾಗಿ ಕೆಳಗೆ ನೋಡುತ್ತಿದ್ದನು ಮತ್ತು ದೂರದಲ್ಲಿ ಪ್ರತ್ಯೇಕವಾಗಿ ನಿಂತಿದ್ದನು. ಒಬ್ಬ ಮಹಿಳೆ ಹೀಗೆ ಹೇಳಿದಳು, “ಈ ಕೃತಜ್ಞತೆಯಿಲ್ಲದ ಕಿಡಿಗೇಡಿ ಏನು ಮಾಡಿದ್ದಾನೆಂದು ನೀವು ನೋಡಿದ್ದೀರಾ? ಅವನು ಪೊಲೀಸರನ್ನು ತನ್ನ ಮನೆಗೆ ಕರೆತಂದು ಪೊಲೀಸರ ಹತ್ತಿರ ಹೋದನು ಮತ್ತು ಅಧಿಕಾರಿಗಳಿಗೆ ಇವರ ಬಗ್ಗೆ ದೂರು ನೀಡಿದನು.” ಮತ್ತೊಬ್ಬರು ಹೀಗೆ ಹೇಳಿದರು, "ಈ ಮುಗ್ಧ ಜನರು ದೇಶಕ್ಕೆ ಏನು ನಷ್ಟ ಮಾಡಿದ್ದಾರೆ?" ಅಲ್ಲಿ ಸೇರಿದ್ದ ಎಲ್ಲಾ ಜನರು ಒಂದೇ

# ಸಂಚಿಕೆ 25

**ಧ್ವನಿಯಲ್ಲಿ ಹೀಗೆ ನುಡಿದರು, "ಮಕ್ಕಳ ಅಜ್ಜಿಯ ಮುಖದ ಮೇಲೆ ಭವ್ಯವಾದ ಹೊಳಪು ಮತ್ತು ಗಾಂಭೀರ್ಯವನ್ನು ಗಮನಿಸಿ."**


**ಜನರು ದಿಗ್ಭ್ರಮೆಗೊಂಡರು - ಹೆಚ್ಚೇನೂ ಹೇಳಲಾಗದೆ, ಪೊಲೀಸರು ಅಜ್ಜಿ ಮತ್ತು ಇಬ್ಬರೂ ಸಾಹಿಬ್ಜಾದರನ್ನು ತಮ್ಮೊಂದಿಗೆ ಕರೆದುಕೊಂಡು ಹೋಗುವುದನ್ನು ಅಸಹಾಯಕತೆಯಿಂದ ನೋಡಿದರು.**

**--------**

# ಸಂಚಿಕೆ 26

ಮಾತಾ ಜೀ ಮತ್ತು ಇಬ್ಬರೂ ಸಾಹಿಬ್ಜಾದರು ಮೊರಿಂಡಾದಲ್ಲಿ ಬಂಧನದಲ್ಲೇ ರಾತ್ರಿಯಲ್ಲಾ ಕಳೆದರು.

ಶಾಂತಿದೂತರಂತಿದ ಮಾತಾ ಗುಜ್ರಿ ಅವರು, ಇಬ್ಬರೂ ಸಾಹಿಬ್ಜಾದರಿಗೆ ಬಹಳ




ಪ್ರೀತಿಯಿಂದ ಮತ್ತು ಪ್ರೇಮದಿಂದ ಗುರುನಾನಕ್ ಅವರ ಸಿಖ್ ಅನುಯಾಯಿಗಳ ಸಾಟಿಯಿಲ್ಲದ ಶೌರ್ಯ ಮತ್ತು ಎದೆಗಾರಿಕೆಯ ಹಲವಾರು ದಂತಕಥೆಗಳನ್ನು ಹೇಳಿದರು. ಗುರು ಅರ್ಜನ್ ದೇವ್ ಜೀ ಮತ್ತು ಗುರು ತೇಜ್ ಬಹದ್ದೂರ್ ಜೀ ಅವರ ಹುತಾತ್ಮರ ಅಭೂತಪೂರ್ವ ಕಥೆಗಳನ್ನು ಹೇಳಿ ಅವರು ಮಕ್ಕಳನ್ನು ಪ್ರೇರೇಪಿಸಿದರು.

ನಂತರ, ಮೂವರೂ ಸಹ ಸಂಜೆ ಮತ್ತು ರಾತ್ರಿಯ ಪ್ರಾರ್ಥನೆಯನ್ನು ಸಲ್ಲಿಸಿದರು ಮತ್ತು ಜೈಲಿನ ಒರಟು ನೆಲದ ಮೇಲೆ ನಿದ್ರಿಸಿದರು.

---------

# ಸಂಚಿಕೆ 27

ಮರುದಿನ, ಮುಂಜಾನೆಯೇ, ಒಂದು ಎತ್ತಿನ ಗಾಡಿಯಲ್ಲಿ ಮಾತಾ ಜೀ ಮತ್ತು ಇಬ್ಬರೂ ಸಾಹಿಬ್ಜಾದರನ್ನು 'ಬಸ್ಸಿ' ಎಂಬ ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಎತ್ತಿನ




ಗಾಡಿಯೊಂದಿಗೆ ಜನರ ಬೃಹತ್ ಗುಂಪೂ ಸಹ ಉದ್ದಕ್ಕೆ ಸಾಗುತ್ತಿತ್ತು. ಸಂಪೂರ್ಣ ಆಶ್ಚರ್ಯದಿಂದ, ಜನರು ತಮ್ಮಲ್ಲಿಯೇ ಹೀಗೆ ಮಾತನಾಡಿಕೊಳ್ಳುತ್ತಿದ್ದರು, ವೃದ್ಧ ಮಹಿಳೆ ಮತ್ತು ಮುಗ್ಧ ಪುಟ್ಟ ಮಕ್ಕಳನ್ನು ಏಕೆ ಬಂಧಿಗಳಾಗಿ ಕರೆದುಕೊಂಡು ಹೋಗುತ್ತಿದ್ದಾರೆ. ಮಾತಾ ಜೀ ಮತ್ತು ಇಬ್ಬರೂ ಸಾಹಿಬ್ಜಾದರನ್ನು ಹೊತ್ತ ಎತ್ತಿನ ಗಾಡಿ ಎಲ್ಲೆಲ್ಲಿ ಹಾದುಹೋಗುತ್ತಿತ್ತೋ, ಅಲ್ಲೆಲ್ಲಾ, ಜನರು ಮನೆಯಿಂದ ಹೊರಬಂದು ಗೌರವ ಸಲ್ಲಿಸುತ್ತಿದ್ದರು. ಧೈರ್ಯಶಾಲಿ ಮತ್ತು ನಿರ್ಭೀತ ಸಾಹಿಬ್ಜಾದರ ಮುಖಗಳನ್ನು ಜನರು ನೋಡಿದಾಗ, ಅವರು ಹೀಗೆ ಹೇಳಿದರು,

# ಸಂಚಿಕೆ 28

"ಇವರು ತಮ್ಮ ಧೈರ್ಯಶಾಲಿ ತಂದೆಯ ಧೈರ್ಯಶಾಲಿ ಮಕ್ಕಳು."

ಗುರುಗಳ ಬಂಧಿತ ಕುಟುಂಬಸ್ಥರನ್ನು ಕರೆದುಕೊಂಡು ಹೋಗುವುದನ್ನು ನೋಡುತ್ತಿದ್ದ ಪುರುಷರು ಮತ್ತು ಮಹಿಳೆಯರಿಂದ ಅಂತಹ ಮಾತುಗಳು ಮತ್ತು ಭಾವನೆಗಳನ್ನು ಕೇಳುತ್ತಿದ್ದ ಪೊಲೀಸರು, ಭಯದಿಂದ ವೇಗವಾಗಿ ಮುಂದಕ್ಕೆ ಹೋಗಲು ಪ್ರಾರಂಭಿಸಿದರು. ಸಾಧ್ಯವಾದಷ್ಟು ಬೇಗ ಸಿರ್ಹಿಂದ್ ತಲುಪಲು ವೇಗವಾಗಿ ಚಲಿಸಲು, ಎತ್ತಿನ ಗಾಡಿಯ ಮಾಲೀಕನು ಪ್ರಾಣಿಗಳನ್ನು ಪ್ರಚೋದಿಸಿದನು.

----

# ಸಂಚಿಕೆ 29

**ಕಾಲ್ನಡಿಗೆಯಲ್ಲಿ ಪೋಲೀಸರು ಕರೆದುಕೊಂಡು ಹೋಗುತ್ತಿದ್ದ ಇಬ್ಬರೂ ಸಾಹಿಬ್ಜಾದರನ್ನು, ನವಾಬ್ ವಜೀರ್ ಖಾನ್ ಅವರ ನ್ಯಾಯಾಲಯಕ್ಕೆ ಕರೆದೊಯ್ಯಲಾಯಿತು. ಸಾಹಿಬ್ಜಾದರು**



**ನ್ಯಾಯಾಲಯದ ಹತ್ತಿರ ಬಂದಾಗ, ಮುಖ್ಯ ದ್ವಾರ ಮುಚ್ಚಿರುವುದನ್ನು ಮತ್ತು ಕೇವಲ ಕಿಟಕಿಯಂತಹ ಸಣ್ಣ ಪ್ರವೇಶ ಮಾತ್ರ ತೆರೆದಿರುವುದನ್ನು ಅವರು ಗಮನಿಸಿದರು. ಒಳಗೆ ಹೋಗಲು, ತಮ್ಮ ತಲೆ ಬಾಗಿಸಬೇಕಾಗಿತ್ತು.**

**ತುಂಬಾ ಚಾಣಾಕ್ಷರಾದ ಸಾಹಿಬ್ಜಾದರು, ನವಾಬನ ಕುತಂತ್ರವನ್ನು ಬೇಗನೆ ಅರ್ಥ ಮಾಡಿಕೊಂಡು ಬಹಳ ಬುದ್ಧಿವಂತಿಕೆಯಿಂದ, ರಾಜ್ಯದ**

# ಸಂಚಿಕೆ 30

**ಅಧಿಕಾರದ ಮುಂದೆ ತಲೆ**

**ಬಾಗದೆಯೇ,**

**ತಮ್ಮ ಪಾದಗಳನ್ನು ಮೊದಲು ಒಳಗೆ ನುಗ್ಗಿಸಿದರು.**

------

# ಸಂಚಿಕೆ 31

ನವಾಬ್ ವಜೀರ್ ಖಾನ್ ಅವನ ಆಸ್ಥಾನದಲ್ಲಿ ಅಧಿವೇಶನ ನಡೆಯುತ್ತಿತ್ತು.



ಶಿಸುತ್ತಿದ್ದಂತೆಯೇ, ಅವರು ಗುರುವಿನ

ವಿಶ್ವಾಸದಿಂದ ಮತ್ತು ನಿರ್ಭೀತಿಯಿಂದ ಹೇಳಿದರು.

*ವಾಹೇ ಗುರು ಜೀ ಕಾ ಖಲ್ಸಾ,*

*ವಾಹೇ ಗುರು ಜೀ ಕೀ ಫತೇಹ!*

ಸಾಹಿಬ್ಜಾದರ ಪ್ರತಿಧ್ವನಿಸುವ ವಂದನೆಗಳು, ಈ ಧೈರ್ಯಶಾಲಿ ಮತ್ತು ನಿರ್ಭೀತ ಯುವ ಮಕ್ಕಳ ಕಡೆ ಎಲ್ಲರ ಗಮನವನ್ನು ಸೆಳೆಯಿತು.

-----

# ಸಂಚಿಕೆ 32

ಪ್ರಕಾಶಮಾನವಾದ ಕವಚಗಳೊಂದಿಗೆ ಧರಿಸಿರುವ ಕತ್ತಿಗಳೊಂದಿಗೆ, ಕೇಸರಿ ವಸ್ತ್ರಗಳಿಂದ ಅಲಂಕರಿಸಿರುವ ಸುಂದರ ಹುಡುಗರು, ತುಂಬಾ ಸುಂದರವಾಗಿ



ು. ಎಲ್ಲಾ ಆಸ್ಥಾನಿಕರು ಅವರನ್ನು

ನವಾಬ್ ವಜೀರ್ ಖಾನ್ ಅವರನ್ನು ನೋಡಿ ಬಹಳ ಪ್ರೀತಿಯಿಂದ ಹೀಗೆ ಹೇಳಿದರು, “ಮಕ್ಕಳೇ, ನೀವು ತುಂಬಾ ಸುಂದರವಾಗಿ ಮತ್ತು ಆಕರ್ಷಕವಾಗಿ ಕಾಣುತ್ತಿದ್ದೀರಿ. ನೀವು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿ ಮುಸಲ್ಮಾನರಾಗಲು ಮುಂದಾದರೆ ಇಸ್ಲಾಮ್‌ನ ರಾಷ್ಟ್ರವು ನಿಮ್ಮ ಬಗ್ಗೆ ಹೆಮ್ಮೆಪಡುತ್ತದೆ. ನಿನ್ನ ಇಷ್ಟಾರ್ಥಗಳೆಲ್ಲವೂ ನೆರವೇರುತ್ತವೆ.”

ಇಬ್ಬರೂ ಸಾಹಿಬ್ಜಾದರು ದೃಢವಾಗಿ ಮತ್ತು ಏಕಧ್ವನಿಯಿಂದ ಹೀಗೆ ಮಾತನಾಡಿದರು, "ನಾವು ನಮ್ಮ ಧರ್ಮದ ಬಗ್ಗೆ ಹೆಮ್ಮೆಪಡುತ್ತೇವೆ ಮತ್ತು ಭೌತಿಕ ವಸ್ತುಗಳು ಎಂದರೆ ನಮಗೆ ತೃಣಕ್ಕೆ ಸಮಾನ."

# ಸಂಚಿಕೆ 33

**ಆ ಮಕ್ಕಳ ದೃಢವಾದ ಮತ್ತು ಸ್ಥಿರ ನಿರ್ಣಯದ ಪ್ರತಿಕ್ರಿಯೆಯಿಂದ ನವಾಬನಿಗೆ ತುಂಬಾ ಕೋಪ ಬಂತು.**

**-------**

# ಸಂಚಿಕೆ 34

ಇಬ್ಬರು ಸಾಹಿಬ್ಜಾದರಿಗೆ, ಅವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರೆ, ನವಾಬ್ ವಜೀರ್ ಖಾನ್ ಅಪಾರ ಸಂಪತ್ತು, ಅಲಂಕಾರಿಕ ಬಿರುದುಗಳು, ಉನ್ನತ ಸ್ಥಾನಗಳು ಮತ್ತು ಎಲ್ಲಾ ರಾಜ ಸವಲತ್ತುಗಳನ್ನು ಒದಗಿಸುವಂತೆ ತಿಳಿಸಿದನು.

ಇಬ್ಬರೂ ಸಾಹಿಬ್ಜಾದರು, ತಮ್ಮ ಅಪ್ರತಿಮ ಶೈಲಿ ಮತ್ತು ವೈಖರಿಯಲ್ಲಿ ದೃಢವಾಗಿ ಮತ್ತು ಏಕಧ್ವನಿಯಲ್ಲಿ ಹೀಗೆ ಹೇಳಿದರು, "ಸತ್ಯ ಮತ್ತು ನಮ್ಮ ನಂಬಿಕೆಯನ್ನು ಎತ್ತಿಹಿಡಿಯಲು ನಾವು ನಮ್ಮ ಜೀವತ್ಯಾಗ ಮಾಡಲು ಸಿದ್ಧರಿದ್ದೇವೆ." ಸಾಹಿಬ್ಜಾದರ ಪ್ರತಿಕ್ರಿಯೆಯನ್ನು ಕೇಳಿ, ನವಾಬನು ತುಂಬಾ ಕೋಪ ಮತ್ತು ದಿಗ್ಭ್ರಮೆಗೊಂಡನು. ಸಾಹಿಬ್ಜಾದರ ವಿರುದ್ಧ ತನ್ನ ಧಾರ್ಮಿಕ ಅನುಮೋದನೆಯನ್ನು ತಿಳಿಸಲು, ಅವನು ನ್ಯಾಯಾಲಯದ ಪೀಠದಲ್ಲಿ 'ಖಾಜಿ' ಅಥವಾ ಧಾರ್ಮಿಕ ಪ್ರಾಧಿಕಾರಿಯನ್ನು ಕರೆದನು.



ನವಾಬನ ನಿರ್ದೇಶನವನ್ನು ಕೇಳಿ ಖಾಜಿಯು ತಬ್ಬಿಬ್ಬಾದನು.

-----

# ಸಂಚಿಕೆ 35

ಇನ್ನೊಂದು ಬಾರಿ, ನವಾಬ್ ವಜೀರ್ ಖಾನ್, ಸಾಹಿಬ್ಜಾದರಿಗೆ ಬಹಳ ಸಮಾಧಾನಕರ ರೀತಿಯಲ್ಲಿ ಸಲಹೆ ನೀಡಲು ಪ್ರಯತ್ನಿಸಿದನು. ಆತನು ಸಾಹಿಬ್ಜಾದರಿಗೆ ಹೀಗೆ ಹೇಳಿದನು,



'ನೀವು ಇನ್ನೂ ತುಂಬಾ ಎಳೆಯಪ್ರಾಯದವರಿದ್ದೀರಿ, ಮತ್ತು ನೀವು ಆನಂದಿಸಬಹುದಾದ ಪೂರ್ಣ ಜೀವನವನ್ನು ಮುಂದೆ ಹೊಂದಿದ್ದೀರಿ. ನಮ್ಮ ಮಾತುಗಳನ್ನು ಒಪ್ಪಿಕೊಳ್ಳಿ, ಮತ್ತು ನಾವು ನಿಮಗೆ ಗಣನೀಯ ಭೂ ಅನುದಾನವನ್ನು ನೀಡುತ್ತೇವೆ (ಜಾಗೀರು) - ಇಲ್ಲಿ ಮತ್ತು ಆಚೆ ಸ್ವರ್ಗದಲ್ಲಿಯೂ ಸಹ ನೀವು ಸಂಪತ್ಭರಿತ ಸಮೃದ್ಧವಾದ ಐಷಾರಾಮಿ ಜೀವನವನ್ನು ನಡೆಸುತ್ತೀರಿ.

ಅತ್ಯಂತ ಧೈರ್ಯದಿಂದ ಮತ್ತು ನಿರ್ಭೀತಿಯಿಂದ, ಸಾಹಿಬ್ಜಾದ ಜೋರಾವರ್

# ಸಂಚಿಕೆ 36

ಸಿಂಗ್ ಹೀಗೆ ಹೇಳಿದರು, 'ನಮ್ಮ ಹೋರಾಟವು ದೌರ್ಜನ್ಯ ಮತ್ತು ಅನ್ಯಾಯದ ವಿರುದ್ಧವಾಗಿದೆ. ನಾವು ಗುರು ಗೋಬಿಂದ್ ಸಿಂಗ್ ಅವರ ಮಕ್ಕಳು, ಗುರು ತೇಜ್ ಬಹದ್ದೂರ್ ಅವರ ಮೊಮ್ಮಕ್ಕಳು, ಮತ್ತು ನಮ್ಮ ಪೂರ್ವಜರು ಗುರು ಅರ್ಜನ್ ದೇವ್ ಜೀ ಯಂತಹ ವಂಶಕರಾಗಿದ್ದಾರೆ. ನಮ್ಮ ನಂಬಿಕೆಯನ್ನು ರಕ್ಷಿಸಲು, ನಾವು ಅವರ ಹಾದಿಯಲ್ಲಿ ನಡೆಯುತ್ತೇವೆ ಮತ್ತು ಯಾವುದೇ ಬಲಿದಾನ ಮಾಡಲು ಹಿಂಜರಿಯುವುದಿಲ್ಲ.

ನವಾಬನು ಮೆಲ್ಲನೆ ಹೀಗೆ ಪಿಸುಗುಟ್ಟಿದ, ‘ಓಹ್! ಅವರ ನಂಬಿಕೆಯಲ್ಲಿ ಅಷ್ಟೊಂದು ಹೆಮ್ಮೆ ಇದೆಯೇ!’

----------

# ಸಂಚಿಕೆ 37

ಅಲ್ಲಿದ್ದ ದಿವಾನ್ ಸುಚಾ ನಂದ್ ಎದ್ದುನಿಂತು ಸಾಹಿಬ್ಜಾದರ ಬಳಿಗೆ ಹೋದನು. 'ನಿಮ್ಮನ್ನು ಬಿಡುಗಡೆಗೊಳಿಸಿದರೆ ನೀವು ಎಲ್ಲಿಗೆ ಹೋಗುತ್ತೀರಿ?' ಎಂದು ಅವರನ್ನು ಕೇಳಿದರು. ಸಾಹಿಬ್ಜಾದಾ ಜೋರಾವರ್ ಸಿಂಗ್ ಹೀಗೆ ಹೇಳಿದರು, 'ನಾವು ಕಾಡಿಗೆ ಹೋಗುತ್ತೇವೆ,




ನಮ್ಮ ಸಿಖ್ಖರನ್ನು ಒಟ್ಟುಗೂಡಿಸುತ್ತೇವೆ, ಕುದುರೆಗಳನ್ನು ಕೂಡಿಸಿಕೊಳ್ಳುತ್ತೇವೆ, ಮತ್ತು ನಿಮ್ಮ ವಿರುದ್ಧ ಹೋರಾಡಲು ಹಿಂತಿರುಗುತ್ತೇವೆ.'

ದಿವಾನ್ ಸುಚಾ ನಂದ್ ಹೀಗೆ ಮುಂದುವರಿಸಿದನು, "ನಿಮ್ಮ ತಂದೆಯನ್ನು ಒಂದು ಯುದ್ಧದಲ್ಲಿ ಕೊಲ್ಲಲಾಗಿದೆ ಎಂದು ನಿಮಗೆ ತಿಳಿದಿದೆಯೇ - ವಿರೋಧಿಸುವುದನ್ನು ನಿಲ್ಲಿಸಿ ಮತ್ತು ನವಾಬರ ಸಲಹೆಯನ್ನು

# ಸಂಚಿಕೆ 38

**ಒಪ್ಪಿಕೊಳ್ಳಿ."**

**ಇಬ್ಬರೂ ಸಾಹಿಬ್ಜಾದರು ಒಂದೇ ಧ್ವನಿಯಲ್ಲಿ ಹೀಗೆ ಹೇಳಿದರು, 'ನಮ್ಮ ತಂದೆಯನ್ನು ಯಾರು ಕೊಲ್ಲಲು ಸಾಧ್ಯ? ಅವರು ಸಾಕಷ್ಟು ಸಮರ್ಥರು. ನಮಗೆ ನಿಮ್ಮ ಸಲಹೆಯ ಅಗತ್ಯವಿಲ್ಲ. ಈ ನಿರಂಕುಶ ಮತ್ತು ದಬ್ಬಾಳಿಕೆಯ ಆಡಳಿತ ನಾಶವಾಗುವವರೆಗೂ ನಾವು ಹೋರಾಟ ನಡೆಸುತ್ತೇವೆ.'**

------

# ಸಂಚಿಕೆ 39

ಸುಚಾ ನಂದನನ್ನು ಉದ್ದೇಶಿಸಿ, ಸಾಹಿಬ್ಜಾದರು ಸಿಖ್ ವಂಶದ ಸಂಪ್ರದಾಯಗಳನ್ನು ಎತ್ತಿ ತೋರಿಸುವ ಕೆಲ ಕಾವ್ಯಾತ್ಮಕ ಸಾಲುಗಳನ್ನು ನುಡಿದರು. ಅವರು ಹೀಗೆ ಹೇಳಿದರು,

> *ಇದು ನಮ್ಮ ವಂಶದಲ್ಲಿ ವೈಭವದ ಸಂಪ್ರದಾಯವಾಗಿದೆ; ನಾವು ನಮ್ಮ ಜೀವನವನ್ನು ತ್ಯಾಗ ಮಾಡುತ್ತೇವೆಯೇ ಹೊರತು ನಮ್ಮ ನಂಬಿಕೆಯಲ್ಲ!*

ದಿವಾನ್ ಸುಚಾ ನಂದನು ತುಂಬಾ ಕೋಪಗೊಂಡನು ಮತ್ತು ಅದೇ ಸಮಯದಲ್ಲಿ



ಆಶ್ಚರ್ಯಚಕಿತನಾದನು.

ಏನನ್ನೋ ಗೊಣಗುತ್ತಾ ಅವನು ನವಾಬ್ ವಜೀರ್ ಖಾನ್ ಬಳಿಗೆ ಬಂದು ಹೀಗೆ ಹೇಳಿದನು, “ನವಾಬ್ ಸಾಹೇಬರೇ, ಹಾವನ್ನು ಕೊಂದು ಅದರ ಮರಿಗಳನ್ನು ಪೋಷಿಸುವುದು

# ಸಂಚಿಕೆ 40

ಜಾಣತನವಲ್ಲ. ಕತ್ತೆಕಿರುಬದ ಸಂತತಿಯೂ ಕತ್ತೆಕಿರುವೇ ಆಗಿರುತ್ತದೆ. ಈ ಮಕ್ಕಳು ಬೆಳೆದ ನಂತರ ಬಂಡುಖೋರರಾಗುತ್ತಾರೆ - ಆದ್ದರಿಂದ

ಅವರಿಗೆ ಶಿಕ್ಷೆಯಾಗಲೇಬೇಕು."

ನವಾಬನು ದಿವಾನ್ ಸುಚಾ ನಂದನ ಸಲಹೆಯನ್ನು ಎಚ್ಚರಿಕೆಯಿಂದ ಕೇಳಿದನು.

ನವಾಬ್, ಖಾಜಿ ಮತ್ತು ದಿವಾನ್ ಸುಚಾ ನಂದನು ಚರ್ಚಿಸುತ್ತಿದ್ದಾಗ,

-------

# ಸಂಚಿಕೆ 41

ಭಯ ಅಥವಾ ಚಿಂತೆಯ ಯಾವುದೇ ಚಿಹ್ನೆಗಳಿಲ್ಲದೆಯೇ, ಇಬ್ಬರೂ ರಾಜಕುಮಾರರು ತಮಾಷೆ



ಮತ್ತು ಹರ್ಷಭರಿತ ಮನಸ್ಥಿತಿಯಲ್ಲಿ ಪರಸ್ಪರ ಮುಕ್ತವಾಗಿ ಮಾತನಾಡುತ್ತಿದ್ದರು ಸಾಹಿಬ್ಜಾದರ ಭವಿಷ್ಯವನ್ನು ನಿರ್ಧಾರವಾಗುತ್ತಿದ್ದಾಗಲೂ ಅವರ ಮುಖದ ನಿರಾತಂಕದ ನೋಟವನ್ನು ನೋಡಿ ಘಟನಾ ಸ್ಥಳದಲ್ಲಿದ್ದ ಆಸ್ಥಾನಿಕರು ಮತ್ತು ವೀಕ್ಷಕರು ಆಶ್ಚರ್ಯಚಕಿತರಾಗಿದ್ದರು.

ನವಾಬನು ಪುನಃ ಖಾಜಿಯನ್ನು ಹೀಗೆ ಮಾಡುವಂತೆ ಹೇಳಿದನು,

‘ದಿವಾನರ ಪ್ರಶ್ನೆಗಳಿಗೆ ಸೊಕ್ಕಿನ ಉತ್ತರಗಳನ್ನು ಗಮನಿಸಿದಾಗ. ಅವರನ್ನು ಬಂಧಮುಕ್ತಗೊಳಿಸುವುದು ಜಾಣತವೇ ಅಲ್ಲ. ತಮ್ಮ ತಂದೆಯಂತೆ ಈ ಹುಡುಗರೂ ಸಹ ಬಂಡಖೋರರ ಹಾದಿ ಹಿಡಿಯುತ್ತಾರೆ’ ಎಂದು ಹೇಳಿದನು.’

# ಸಂಚಿಕೆ 42

------

# ಸಂಚಿಕೆ 43

ಸುಚಾ ನಂದ್ ಮತ್ತು ಸಾಹಿಬ್ಜಾದರ ನಡುವಿನ ಮೌಖಿಕ ಸಂವಹನವನ್ನೂ ಸಹ ಖಾಜಿ ಗಮನಿಸಿದ್ದನು. ಆತನು ಒಂದು ಕ್ಷಣ ಯೋಚಿಸಿದನು,



ತನ್ನ ಆಸನದಿಂದ ಎದ್ದನು, ಮತ್ತು ತನ್ನ ಅಭಿಪ್ರಾಯವನ್ನು ಹೀಗೆ ತಿಳಿಸಿದನು, "ಈ ಮಕ್ಕಳು ಬಂಡಖೋರರಾಗಲು ನಿರ್ಧರಿಸಿದ್ದಾರೆ - ಅವರನ್ನು ಜೀವಂತವಾಗಿ ಸಮಾಧಿ ಮಾಡಬೇಕು."

ಖಾಜಿಯ ಅಭಿಪ್ರಾಯವನ್ನು ಕೇಳಿ ಅಲ್ಲಿದ್ದವರೆಲ್ಲರೂ ಆಶ್ಚರ್ಯಚಕಿತರಾದರು. ಆದರೆ ನಿರ್ಭೀತ ಸಾಹಿಬ್ಜಾದರು ಸಂಪೂರ್ಣವಾಗಿ ಅದನ್ನು ನಿರ್ಲಕ್ಷಿಸಿದರು ಮತ್ತು ಭಯಭೀತರಾಗದೇ ನಿಂತಿದ್ದರು. ಖಾಜಿಯು ನವಾಬನಿಗೆ ಹೀಗೆ ಸಲಹೆ

# ಸಂಚಿಕೆ 44

ನೀಡಿದನು,

**‘ಈ ಮಕ್ಕಳನ್ನು ಮಲೇರ್-ಕೋಟ್ಲಾದ ನವಾಬನಿಗೆ ಹಸ್ತಾಂತರಿಸಿ, ಈ ಮಕ್ಕಳ ತಂದೆಯಿಂದ ಆದ ತನ್ನ ಸಹೋದರನ ಸಾವಿಗೆ ಅವನು ಸೇಡು ತೀರಿಸಿಕೊಳ್ಳಲು ಸಾಧ್ಯವಾಗಲಿ.’**

----

# ಸಂಚಿಕೆ 45

ನವಾಬನು ಶೇರ್ ಮುಹಮ್ಮದ್ ಖಾನ್ ಅನ್ನು ಕರೆಸಿದನು ಮತ್ತು ಅವನು ಬಂದ ನಂತರ, ನವಾಬನು ಅವನಿಗೆ ಹೀಗೆ ಹೇಳಿದನು, 'ಶೇರ್ ಮುಹಮ್ಮದ್ ಖಾನ್,



ಗುರು ಗೋಬಿಂದ್ ಸಿಂಗ್‌ರ ಸಿಖ್ಖರು ನಿಮ್ಮ ಸಹೋದರನನ್ನು ಕೊಂದಿದ್ದರು; ನಿಮ್ಮ ಸಹೋದರನ ಸಾವಿಗೆ ಸೇಡು ತೀರಿಸಿಕೊಳ್ಳಲು ಇದು ನಿಮಗೆ ಸದವಕಾಶವಾಗಿದೆ. ಗುರುವಿನ ಇಬ್ಬರು ಪುತ್ರರನ್ನು ಬಂಧಿಸಲಾಗಿದೆ, ಮತ್ತು ಅವರು ಬಂಧನದಲ್ಲಿದ್ದಾರೆ. ಅವರನ್ನು ಜೀವಂತವಾಗಿ ಸಮಾಧಿ ಮಾಡಬೇಕೆಂದು ಖಾಜಿ ಅಭಿಪ್ರಾಯಪಟ್ಟಿದ್ದಾರೆ. ಅವರನ್ನು ನಿಮ್ಮ ಕೈಗೆ ಒಪ್ಪಿಸಲಾಗುತ್ತಿದೆ ಮತ್ತು ಖಾಜಿ ಹೇಳಿದ ಶಿಕ್ಷೆಯನ್ನು ನೀವು ಪಾಲಿಸಲೇಬೇಕು.

ಇದನ್ನು ಕೇಳಿ ಶೇರ್ ಮುಹಮ್ಮದ್ ಖಾನ್ ಆಘಾತಕ್ಕೊಳಗಾದನು. ಅವನು

# ಸಂಚಿಕೆ 46

**ಮೂಕವಿಸ್ಮಿತನಾದನು. ಅವನು ಸಾವರಿಸಿಕೊಂಡು, ಆಳವಾದ ಉಸಿರನ್ನು ತೆಗೆದುಕೊಂಡು ಹೇಳಿದನು, 'ನವಾಬ್ ಸಾಹೇಬರೇ, ಇದು ದುಷ್ಕೃತ್ಯವಾಗಿದೆ. ನನ್ನ ಸಹೋದರನು ಯುದ್ಧದಲ್ಲಿ ಕೊಲ್ಲಲ್ಪಟ್ಟನು. ಈ ಪುಟ್ಟ ಮಕ್ಕಳು ಮಾಡಿದ ಅಪರಾಧವಾದರೂ ಏನು?'**

**ದುಃಖದ ಮನಸ್ಸಿನಿಂದ ಅವನು ನ್ಯಾಯಾಲಯದಿಂದ ಹೊರಹೋದನು.**

-----

# ಸಂಚಿಕೆ 47

ಒಂದು ಕಡೆ ನವಾಬನು ಇಬ್ಬರು ಸಾಹಿಬ್ಜಾದರನ್ನು ಬುರ್ಜ್‌ನಲ್ಲಿ ಸೆರೆಮನೆಗೆ ಹಿಂತಿರುಗುವಂತೆ ಆದೇಶಿಸಿದನು. ಹಾಗೆಯೇ ಮತ್ತೊಂದೆಡೆ, ಶಿಕ್ಷೆಯನ್ನು ವೇಗವಾಗಿ ಜಾರಿಗೊಳಿಸಲು ಮರಣದಂಡನೆಕಾರನನ್ನು ಹುಡುಕುವಂತೆ ಅವನು ತನ್ನ ನಿರ್ವಾಹಕರಿಗೆ ನಿರ್ದೇಶಿಸಿದನು.




ಸಾಹಿಬ್ಜಾದರು ತಣ್ಣನೆಯ ಬುರ್ಜ್‌ನಲ್ಲಿ ತಮ್ಮ ಅಜ್ಜಿಯೊಂದಿಗೆ ಸೇರಿದರು ಮತ್ತು ನ್ಯಾಯಾಲಯದಲ್ಲಿ ನಡೆದ ಇಡೀ ದಿನದ ಕಲಾಪವನ್ನು ವಿವರಿಸಿದರು. ಮಾತಾ ಜೀ ಅವರು, ಇಬ್ಬರೂ ಸಾಹಿಬ್ಜಾದರ ನಡವಳಿಕೆಯನ್ನು ಶ್ಲಾಘಿಸಿದರು ಮತ್ತು ಅವರನ್ನು ಬಿಗಿಯಾಗಿ ಅಪ್ಪಿಕೊಂಡರು. ‘ನೀವು ಯಶೋವಂತರಾಗಿ ಬಂದಿದ್ದೀರಿ! ವಾಹೇಗುರು (ದೇವರು) ಎಂದೆಂದಿಗೂ ನಿಮ್ಮೊಂದಿಗಿದ್ದಾನೆ.’

----

# ಸಂಚಿಕೆ 25

ಮರುದಿನ ಬೆಳಿಗ್ಗೆ, ಪುನಃ ಇಬ್ಬರೂ ಸಾಹಿಬ್ಜಾದರನ್ನು ಮತ್ತೊಮ್ಮೆ ... ಡಿಸಲಾಯಿತು. ನವಾಬನು ಪುನಃ



'ಮಕ್ಕಳೇ, ನೀವು ಏನು ನಿರ್ಧರಿಸಿದ್ದೀರಿ? ನೀವು ಇಸ್ಲಾಮ್ ಧರ್ಮವನ್ನು ಸ್ವೀಕರಿಸಲು ಬಯಸುತ್ತೀರಾ ಅಥವಾ ಜೀವಂತ ಸಮಾಧಿಯಾಗಲು ಬಯಸುತ್ತೀರಾ? ಇಬ್ಬರೂ ಸಾಹಿಬ್ಜಾದರು ಯಾವುದೇ ಹಿಂಜರಿಕೆ ಅಥವಾ ಭಯವಿಲ್ಲದೆ ಹೀಗೆ ಹೇಳಿದರು, "ನಾವು ಎಂದೆಂದಿಗೂ ನಮ್ಮ ನಂಬಿಕೆಯನ್ನು ತ್ಯಜಿಸುವುದಿಲ್ಲ."

ಇದನ್ನು ಕೇಳಿ ನವಾಬನಿಗೆ ಆಶ್ಚರ್ಯವಾಯಿತು. ಒಬ್ಬ ನಿರ್ವಾಹಕನು ಮುಂದೆ ಬಂದು ಹೀಗೆ ಹೇಳಿದನು, ಮಾನ್ಯರೇ, ಇಬ್ಬರು ರಾಜ ಮರಣದಂಡನೆಕಾರರು ದೆಹಲಿಯಿಂದ ಬಂದಿದ್ದಾರೆ - ಶಷಾಲ್ ಬೇಗ್ ಮತ್ತು ಬಷಾಲ್ ಬೇಗ್, ಇವರು

'ಸಮನಾ' ದ ನಿವಾಸಿಗಳಾಗಿದ್ದು, ನ್ಯಾಯಾಲಯದ ಪ್ರಕರಣದಲ್ಲಿ ಹಾಜರಾಗಲು ಬಂದಿದ್ದಾರೆ. ನೀವು ಅವರನ್ನು ದೋಷಮುಕ್ತಗೊಳಿಸಿದರೆ, ಈ ಇಬ್ಬರೂ ಮರಣದಂಡನೆಕಾರರು ಇಬ್ಬರೂ ಮಕ್ಕಳನ್ನೂ ಸಹ ಸಮಾಧಿ ಮಾಡಲು ಸಿದ್ಧರಾಗಿದ್ದಾರೆ.'

ನವಾಬನು 'ಈ ಮರಣದಂಡನೆಕಾರರ' ಪ್ರಕರಣವನ್ನು ವಜಾಗೊಳಿಸುವಂತೆ ನಿರ್ದೇಶಿಸಿದನು. ಇಬ್ಬರೂ ಸಾಹಿಬ್ಜಾದರನ್ನು ಅವನಿಗೆ ಹಸ್ತಾಂತರಿಸಬೇಕೆಂದು ಅವನು ನಿರ್ದೇಶಿಸಿದನು.

ಮರಣದಂಡನೆಕಾರರು ಮುಂದೆ ಬಂದರು, ನಮಿಸಿದರು ಮತ್ತು ಹೀಗೆ ಹೇಳಿದರು 'ಮಾನ್ಯರೇ, ನಿಮ್ಮ ಇಚ್ಛೆಯಂತೆ ಆಗಿಲಿ.'

-----

# ಸಂಚಿಕೆ 50

ಪೊಲೀಸರು ಇಬ್ಬರೂ ಸಾಹಿಬ್ಜಾದರನ್ನು ನ್ಯಾಯಾಲಯದಿಂದ ಹೊರಗೆ ಕರೆತಂದರು. ಹೊರಗೆ ಬೃಹತ್ ಸಂಖ್ಯೆಯಲ್ಲಿ ಪ್ರೇಕ್ಷಕರಾಗಿ ಜನರು ಜಮಾಯಿಸಿದ್ದರು.



ಇಬ್ಬರು ಎಳೆಪ್ರಾಯದ ಮಕ್ಕಳನ್ನು ಜೀವಂತವಾಗಿ ಸಮಾಧಿ ಮಾಡಲು ಶಿಕ್ಷೆ ವಿಧಿಸಲಾಗಿದೆ ಎಂದು ತಿಳಿದಿದ್ದ ಜನರಿಗೆ (ಪುರುಷರು ಮತ್ತು ಮಹಿಳೆಯರು) ಭಯಂಕರವಾದ ಬೆರಗು ಉಂಟಾಗಿತ್ತು. ಜನರು ಹೀಗೆ ಕೇಳುತ್ತಿದ್ದರು:

'ಈ ಪುಟ್ಟ ಮಕ್ಕಳು ಏನು ಅಪರಾಧ ಮಾಡಿದ್ದಾರೆ?'

'ಓ ದೇವರೇ, ಇದೊಂದು ವಿಡಂಬನೆಯಾಗಿದೆ. ಇದು ಗಂಭೀರವಾದ ಅನ್ಯಾಯವಾಗಿದೆ.'

'ಓ' ದೈವವೇ, ಪುಟ್ಟ ಮಕ್ಕಳು ಎಷ್ಟು ನಿರ್ಭೀತರಾಗಿದ್ದಾರೆಂದು ನೀವು ನೋಡುತ್ತಿದ್ದೀರಾ? 'ಅವರು ನಿಸ್ಸಂದೇಹವಾಗಿ ಗುರು ಗೋಬಿಂದ್ ಸಿಂಗ್ ಅವರ

# ಸಂಚಿಕೆ 51

## ಧೈರ್ಯಶಾಲಿ ಪುತ್ರರು.

ಜನರು ಗಾಬರಿಗೊಂಡು ತಮ್ಮ ನಾಲಿಗೆಗಳನ್ನು ಕಚ್ಚಿಕೊಳ್ಳುತ್ತಿದ್ದರು. ಪೊಲೀಸರು ಮಕ್ಕಳನ್ನು ಬೇಗನೆ ಮುಂದೆ ಹೋಗುವಂತೆ ಹೇಳುತ್ತಿದ್ದರು. ಜನರು ಏನು ಹೇಳುತ್ತಿದ್ದಾರೆ ಎಂದು ಕೇಳುತ್ತಿದ್ದ ಪೊಲೀಸರು ಕೆಳಗೆ ನೋಡುತ್ತಾ ಮುಂದೆ ಸಾಗುತ್ತಿದ್ದರು.

----

# ಸಂಚಿಕೆ 52

ಗೋಡೆ ಕಟ್ಟುತ್ತಿರುವ ಸ್ಥಳಕ್ಕೆ, ಸಾಹಿಬ್ಜಾದರನ್ನು ಕರೆತರಲಾಯಿತು. ಘಟನಾ ಸ್ಥಳದಲ್ಲಿ ಖಾಜಿ ಕೂಡ ಉಪಸ್ಥಿತನಿದ್ದನು.



ಇಬ್ಬರೂ ಸಾಹಿಬ್ಜಾದರನ್ನು ಗೋಡೆಗಳನ್ನು ಕಟ್ಟುತ್ತಿದ್ದ ಸ್ಥಳದ ಮಧ್ಯದಲ್ಲಿ ಇರಿಸಲಾಗಿತ್ತು. ಖಾಜಿ, ಮತ್ತೊಮ್ಮೆ ಸಾಹಿಬ್ಜಾದರನ್ನು ಹೀಗೆ ಹೇಳಿದನು; "ಇಸ್ಲಾಮ್ ಅನ್ನು ಒಪ್ಪಿಕೊಳ್ಳಿ; ಅನ್ಯಾಯವಾಗಿ ನಿಮ್ಮ ಪ್ರಾಣವನ್ನು ಕಳೆದುಕೊಳ್ಳಲು ನೀವು ಏಕೆ ನಿರ್ಧರಿಸಿದ್ದೀರಿ?"

ಮರಣದಂಡನೆಕಾರರೂ ಕೂಡ ಸಾಹಿಬ್ಜಾದರಿಗೆ ತಿಳಿಹೇಳಲು ಪ್ರಯತ್ನಿಸಿದರೂ ಅವರ ನಿರ್ಣಯವು ಬಂಡೆಯಂತೆ ಗಟ್ಟಿಯಾಗಿತ್ತು. ಬದಲಾಗಿ, ಮಕ್ಕಳು ತಮ್ಮ ಕೆಲಸವನ್ನು ಮುಂದುವರಿಸುವಂತೆ ಮರಣದಂಡನೆಕಾರರಿಗೆ ಹೇಳಿದರು. 'ಮೊಘಲರ ದಬ್ಬಾಳಿಕೆಯ ಆಡಳಿತವನ್ನು ಕೊನೆಗೊಳಿಸಲು ಬೇಗಬೇಗನೇ ಕೆಲಸ ಮಾಡಿ. ಅವರ ಅಪರಾಧಗಳ ಗೋಡೆಯನ್ನು ಇನ್ನಷ್ಟು ಎತ್ತರಕ್ಕೆ ಏರಿಸಿ.'

ಹೀಗೆ ಹೇಳುತ್ತಾ, ಸಾಹಿಬ್ಜಾದರು ತಮ್ಮ ಬೆಳಗಿನ ಪ್ರಾರ್ಥನೆಯನ್ನು ಸಲ್ಲಿಸಲು

# ಸಂಚಿಕೆ 53

**ಪ್ರಾರಂಭಿಸಿದರು [ಜಪ್ಪಿ ಸಾಹಿ]. ಮರಣದಂಡನೆಕಾರರು ಇನ್ನೂ ಹೆಚ್ಚಿನ ಇಟ್ಟಿಗೆಗಳ ಸಾಲುಗಳನ್ನು ಹಾಕುವಲ್ಲಿ ನಿರತರಾದರು.**

----

# ಸಂಚಿಕೆ 54

ಗೋಡೆಯು ಸಾಹಿಬ್ಜಾದರ ಎದೆಯ ಮಟ್ಟಕ್ಕೆ ತಲುಪಿದ ನಂತರ, ನವಾಬನೂ, ಮತ್ತು ಖಾಜಿ ಸೇರಿದಂತೆ, ಮಕ್ಕಳ ಹತ್ತಿರ ಬಂದು ಹೀಗೆ ಹೇಳಿದರು, 'ಮಕ್ಕಳೇ,



ಇನ್ನೂ ಸಮಯವಿದೆ, ನಿಮ್ಮ ಜೀವ ಉಳಿಸಬಹುದು. ಕುರಾನ್‌ನ ಪ್ರಾರ್ಥನೆಗಳನ್ನು ಸಲ್ಲಿಸಿ, ನಂತರ ಗೋಡೆಯನ್ನು ತೆಗೆಯಲಾಗುತ್ತದೆ.'

ಇಬ್ಬರೂ ಸಾಹಿಬ್ಜಾದರು ಅಚಲವಾದ ಸಂಕಲ್ಪವನ್ನು ಹೊಂದಿದ್ದರು ಮತ್ತು ಸ್ಪಷ್ಟವಾಗಿ ಮತ್ತು ದೃಢವಾಗಿ ಹೀಗೆ ಮಾತನಾಡಿದರು,

'ನಮ್ಮ ನಂಬಿಕೆಯನ್ನು ನಾವು ಬಿಡುವುದಿಲ್ಲ. ನಮ್ಮ ಪ್ರಾಣ ಕಳೆದುಕೊಳ್ಳುವ ಭಯ ನಮಗಿಲ್ಲ. ನಾವು ಲಕ್ಷಾಂತರ ಬಾರಿ ಜನಿಸಿದರೂ ಕೂಡ, ನಾವು ಅದನ್ನು ನಮ್ಮ ನಂಬಿಕೆಯ ಸೇವೆಗೆಯೇ ಅರ್ಪಿಸುತ್ತೇವೆ.'

# ಸಂಚಿಕೆ 55

**ನವಾಬ್ ಮತ್ತು ಖಾಜಿ ಮಕ್ಕಳ ದೃಢವಾದ ಸಂಕಲ್ಪವನ್ನು ಗಮನಿಸಿ ದಿಗ್ಭ್ರಮೆಗೊಂಡರು. ಸುತ್ತಮುತ್ತಲಿನ ಪ್ರೇಕ್ಷಕರಿಗೆ ತಮ್ಮ ಕಣ್ಣೀರನ್ನು ತಡೆದುಕೊಳ್ಳಲು ಸಾಧ್ಯವಾಗಲಿಲ್ಲ. ಜನರು ಏಕಮತದಲ್ಲಿ ಹೀಗೆ ಹೇಳುತ್ತಿದ್ದರು:**

***‘ಇಂತಹ ಮಕ್ಕಳಿಗೆ ಜನ್ಮ ನೀಡಿದ ತಾಯಿಯೇ ಧನ್ಯಳು. ತಂದೆಯು ಧನ್ಯನು.’***

-----

# ತೆಗೆದುಕೊಂಡು ಹೋಗಿ....

*ದುರದೃಷ್ಟವಶಾತ್, ಸಾಹಿಬ್ಜಾದರು, ಭೌತಿಕವಾಗಿ ನಮ್ಮ ನಡುವೆ ಇಲ್ಲ, ಆದರೆ ಆ ಮಕ್ಕಳ ಅತ್ಯುನ್ನತ ಬಲಿದಾನದ ಸ್ಮರಣೆಯು ನಮ್ಮನ್ನು ದೇವರು ನೀಡಿದ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳಿಗಾಗಿ ಕಾವಲು ಕಾಯಲು ಪ್ರೇರೇಪಿಸುತ್ತದೆ.*

*ಈ ಅತ್ಯುನ್ನತ ಸುವರ್ಣ ತತ್ವಗಳನ್ನು ಅನೇಕ ಪ್ರಜಾಪ್ರಭುತ್ವ ರಾಷ್ಟ್ರಗಳ ಸಂವಿಧಾನಗಳಲ್ಲಿ ಪ್ರತಿಷ್ಠಾಪಿಸಲಾಗಿದ್ದರೂ ಸಹ, ವಿಷಾದದ ಸಂಗತಿಯೆಂದರೆ ಇವುಗಳನ್ನು ಪ್ರಾಧಿಕಾರಗಳು ಮತ್ತು ಅಧಿಕಾರಿಗಳು ಎತ್ತಿಹಿಡಿಯಬೇಕಿದ್ದರೂ ಕೂಡ; ಇದನ್ನು ಗೌರವಿಸುವುದಕ್ಕಿಂತ ಹೆಚ್ಚಾಗಿ ತುಳಿಯಲಾಗುತ್ತದೆ.*

*ಯಾವುದೇ ಸರ್ಕಾರ ಅಥವಾ ಸಮಾಜ ಸಾಹಿಬ್ಜಾದರನ್ನು ಹುತಾತ್ಮರಾಗಲಿ ಎಂದು ಕೇಳಿಕೊಂಡಿದ್ದಕ್ಕೆ ಅವರು ಹುತಾತ್ಮರಾಗಲಿಲ್ಲ, ಬದಲಾಗಿ, ಸಾಹಿಬ್ಜಾದರನ್ನು ಬೆಳೆಸಿದ ಸಂಸ್ಕೃತಿ ಮತ್ತು ಅವರ ಆತ್ಮಸಾಕ್ಷಿಯು ಮೊಘಲ್ ಆಡಳಿತದ ಸಾರ್ವಭೌಮತ್ವವನ್ನು ಎದುರಿಸಲು ಅವರಿಗೆ ಧೈರ್ಯ ಮತ್ತು ಶಕ್ತಿಯನ್ನು ನೀಡಿತು.*

*ಆಧ್ಯಾತ್ಮಿಕ ಸ್ಫೂರ್ತಿಯ ಹಣತೆ ನಮ್ಮೆಲ್ಲರಲ್ಲಿದೆ. ಇದು ಕೇವಲ ಮಿನುಗುತ್ತಿದೆ. ಉನ್ನತ ಮಟ್ಟದ ಸಾಮೂಹಿಕ ಒಳಿತಿಗಾಗಿ ಮತ್ತು ನಮ್ಮ ದೇವರು ನೀಡಿದ ಮಾನವ ಹಕ್ಕುಗಳು, ಮುಕ್ತತೆಗಳು ಮತ್ತು ಸ್ವಾತಂತ್ರ್ಯಗಳನ್ನು ರಕ್ಷಿಸಲು ಮತ್ತು ಆನಂದಿಸುವ ನಿಟ್ಟಿನಲ್ಲಿ ದೃಢ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಸಾಹಿಬ್ಜಾದರ ಬಲಿದಾನದ ಅದ್ಭುತ ಉದಾಹರಣೆಯನ್ನು ಗೌರವಿಸುವುದು ನಮಗೆ ಬಿಟ್ಟಿದ್ದಾಗಿದೆ.*